Sri M. V. RAMA RAO.—May I know whether the Government have had the opportunity of seeing the judgment of the High Court ?

Sri A. G. RAMACHANDRA RAO.—Government is perusing the judgment.

Sri M. V. RAMA RAO.—Sir, is the Government in a position to explain why, when a particular bid was knocked down at one of the sales, a private tender was accepted in a manner which is not usually done ?

Mr. SPEAKER.—I think that in view of the judgment already delivered, this question need not be put.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ಸಂಸ್ಥಾನದಲ್ಲಿ ಹೋದವರ್ಷಕ್ಕಿಂತ ಈ ವರ್ಷ ಹರಾಜಿನಲ್ಲಿ ಹೆಚ್ಚು ಆದಾಯವಾಗಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಕಡೆ ಕಡಮೆ ಆಗಿದೆ ಮತ್ತೆ ಕೆಲವು ಕಡೆ ಹೆಚ್ಚಾಗಿದೆ.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ಬಿಡ್ ಮಾಡಿರುವವರಲ್ಲಿ ಮ್ಯೆನೂರಿನವರೆಷ್ಟು, ಬಳ್ಳಾರಿಯವರೆಷ್ಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಳ್ಳಾರಿ ಇನ್ನೂ ಮ್ಯೆನೂರಿಗೆ ಬಂದಿಲ್ಲ.

ಶ್ರೀ ಪೈ. ಎಂ. ಚಂದ್ರಶೇಖರಯ್ಯ.—ನನ್ನ ಪ್ರಶ್ನೆ ಹರಾಜಿನಲ್ಲಿ ಬಿಡ್ ಮಾಡಿರುವವರಲ್ಲಿ ಮ್ಯೆನೂರಿನವರೆಷ್ಟು ಜನ, ಬಳ್ಳಾರಿಯವರೆಷ್ಟು ಜನ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ವಿಂಗಡಣೆ ಮಾಡಿಲ್ಲ.

ಶ್ರೀ ಟಿ. ಹನುಮಯ್ಯ.—ಹಿಂದಿನ ವರ್ಷಕ್ಕಿಂತ ಈ ವರ್ಷ ಲಾಭ ಬಂದಿದೆಯೋ ಅಥವಾ ನಷ್ಟವಾಗಿದೆಯೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಟ್ಟಿನಲ್ಲಿ ಸ್ವಲ್ಪ ನಷ್ಟವಾಗಿದೆಯೆಂದು ಕಾಣುತ್ತದೆ.

ಶ್ರೀ ಟಿ. ಹನುಮಯ್ಯ.—ಹೋದವರ್ಷಕ್ಕಿಂತಲೂ ಆದಾಯ ಈ ವರ್ಷ ಕಡಮೆಯಾಗಬಹುದೆಂದು ನಿರೀಕ್ಷಿಸಿ 20 ಲಕ್ಷ ರೂಪಾಯಿಯನ್ನು ಬಜೆಟ್ಟಿನಲ್ಲಿ ಕಡಮೆ ತೋರಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಟ್ಟಿನಲ್ಲಿ ನುಮಾರು 5 ಲಕ್ಷ ಕಡಮೆ ಬಂದಿದೆ.

ಶ್ರೀ ಟಿ. ಹನುಮಯ್ಯ.—ಹೊಸನೀತಿಯಿಂದ ಹೀಗಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲ.

ಶ್ರೀ ಜಿ. ಶಿವಪ್ಪ.—ಸರ್ಕಾರದವರು ಈ ನೀತಿಯನ್ನು ನುಸರಿಸುವುದರಿಂದ ನಿರೀಕ್ಷಣೆಗಿಂತ ಹಣ ಹೆಚ್ಚು ಬಂದಿದೆಯೋ ಅಥವಾ ಕಡಮೆ ಬಂದಿದೆಯೊ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಂಕಿಗಳಿಂದಲೇ ಗೊತ್ತಾಗುತ್ತದೆ.

Promises made by Ministers.

Q. 336. Sri H. K. SHIVARUDRAPPA (Gundlupet-Heggaddevankote).—

Will the Government be pleased to state :—

(*a*) whether a list of promises made by the Ministers in the Legislature, during their tours and on other occasions is maintained by Government ;

(*b*) whether it has come to their notice that such a list was being maintained and the practice of supplying copies thereof to the members was in vogue before the advent of the popular Government ;

(*c*) the reasons for not supplying the same since the advent of the popular Government ;

(*d*) whether they will arrange to prepare and supply such a list periodically to the members of the Legislature at least hereafter ?

A.—Sri A. G. RAMACHANDRA RAO (Minister for Law and Education).—

(*a*) Yes. Records pertaining to promises made are maintained.

(*b*) The practice is known to Government and is being revived.

(*c*) and (*d*) Do not arise in view of reply to (*b*).

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸಚಿವರುಗಳು ಆಗಾಗ ಮಾಡತಕ್ಕ ವಾಗ್ದಾನಗಳ ಪಟ್ಟಿ ತಯಾರು ಮಾಡಿಕೊಡುತ್ತಿರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಡುತ್ತಿರಲಿಲ್ಲ, ತಯಾರುಮಾಡಿ referenceಗಾಗಿ ಇಟ್ಟುಕೊಳ್ಳುತ್ತಿದ್ದರು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗೆ ಪಟ್ಟಿಮಾಡಿ ಸದಸ್ಯರಿಗೆ ಕೊಡುವುದೊಳ್ಳೆಯದಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆ ರೀತಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ; ಅದಕ್ಕೇನು ಹೇಳುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

Lands granted to Caste Hindus and Depressed Class people

Q.—234. Sri T. HANUMAIAH (Hiriyur—Scheduled Castes).—

Will the Government be pleased to state :—

(*a*) the minimum and maximum extent of dry and wet lands that are given to the Caste Hindus and Depressed Classes from the year 1947 and onwards (districtwar and talukwar) ;

(*b*) whether it has come to their notice that the Caste Hindus are being sanctioned 50 to 100 acres and above

whereas the Depressed Classes applicants are given 2 to 3 acres or even guntas only ;

(c) the names, caste, place with taluk, of the Caste Hindus that have been sanctioned dry and wet lands (separately) ranging from 10 to 50 and 100 acres, and above from 1947 till now ?

A. – Sri KADIDAL MANJAPPA (Minister for Revenue and Public Works).—

(*a*) *to* (*c*) The question is not clear. It is not possible to compile the information required without much time and spending much money which are incommensurate with the results to be achieved.

ಶ್ರೀ ಟಿ. ಹನುಮಯ್ಯ.—ನನ್ನ ಪ್ರಶ್ನೆ ತಮಗೆ ಅರ್ಥವಾಗಲಿಲ್ಲವೆ? ಸ್ಪಷ್ಟವಾಗಿಲ್ಲವೆಂದು ಹೇಳಿದ್ದೀರಿ ?

ಅಧ್ಯಕ್ಷರು.—ಸ್ಪಷ್ಟವಾಗಿಲ್ಲವೆಂದು ಉತ್ತರದಲ್ಲೇ ತಿಳಿಸಿದ್ದಾರೆ.

ಶ್ರೀ ಟಿ. ಹನುಮಯ್ಯ.—ನಾನು ಕೇಳಿರತಕ್ಕ ವಿವರಗಳನ್ನು ಸಂಗ್ರಹಿಸಲು ಕಾಲ ಸಾಲದು, ಹೆಚ್ಚು ಹಣ ಖರ್ಚಾಗುತ್ತದೆ, ಇದನ್ನು ಮಾಡಲು ಸಾಧ್ಯವಿಲ್ಲವೆಂದು ಹೇಳಿದ್ದೀರಿ. ಈಗ ಪ್ರಶ್ನೆಗಳನ್ನು ಹಾಕಿರುವವರಿಗೆ ಉತ್ತರವನ್ನೊದಗಿಸಲು ಹಣಕೊಟ್ಟು ಸಂಗ್ರಹ ಮಾಡಿಸಿಕೊಡುತ್ತೀರಾ ?

Mr. SPEAKER.—Any other question ?

ಶ್ರೀ ಟಿ. ಹನುಮಯ್ಯ.—ಇದಕ್ಕೆ ಸಂಬಂಧಪಟ್ಟ ಹಾಗೆ 1947ರಿಂದ 1952ರವರೆಗಿನ ಅಂಕ ಅಂಶಗಳು ಸಿಕ್ಕದೇಯಿರುವುದರಿಂದ ತೊಂದರೆಯಾಗಿದೆಯೆ ?

ಅಧ್ಯಕ್ಷರು.—ಸಿಕ್ಕುವುದಿಲ್ಲವೆಂದು ಹೇಳಿಲ್ಲ, ಸಿಕ್ಕುತ್ತವೆ ; ಕಾಲ ಬೇಕಾಗುತ್ತದೆಂದು ಹೇಳಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಡೆಪ್ಯುಟಿ ಕಮಿಷನರು, ಅಮಲ್ದಾರರು, ರೆವೆನ್ಯೂ ಕಮಿಷನರು, ಮಂತ್ರಿಗಳು ಇವರು ಒಂದು ಸಲ ಒಬ್ಬ ವ್ಯಕ್ತಿಗೆ ಜಮೀನು ಕೊಡಬೇಕಾದರೆ ಅವರವರ ಅಧಿಕಾರದಲ್ಲಿ ಇಷ್ಟು ಎಕರೆ ಕೊಡಬಹುದೆಂದು ಒಂದು ಫರ್ಮಾವಧಿ ಮತ್ತು ಕನಿಷ್ಠ ಪರಿಮಿತಿ ನಿಗದಿಯಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಲ್ಯಾಂಡ್ ರೆವೆನ್ಯೂ ರೂಲ್ಸ್‌ನಲ್ಲಿದೆ.

Sri G. DUGGAPPA.—Is it a fact that Government have sanctioned to the extent of fifty acres of land to one particular individual ?

Sri KADIDAL MANJAPPA.—Government has got powers to sanction one hundred or four hundred acres of land.

Sri G. DUGGAPPA.—Cannot Government collect figures of grants of land exceeding fifty and hundred acres at a time ?

Sri KADIDAL MANJAPPA.—Sir, in the first place, the question is not clear. The minimum and the maximum extent of dry and wet lands that are given to the Caste Hindus and Depressed Classes—that is the question. I cannot make out the meaning of the present question.

ಶ್ರೀ ಎಂ. ಚಿಕ್ಕಲಿಂಗಯ್ಯ.—ದರಖಾನ್ತು ವಿಚಾರದಲ್ಲಿ ಕ್ವಾರ್ಟರ್ಲಿ ಸ್ಟೇಟ್‌ಮೆಂಟ್‌ಗಳನ್ನು ಕಳುಹಿಸುತ್ತಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಶ್ನೆ ಸರಿಯಾಗಿ ಅರ್ಥವಾಗಲಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ರೆವೆನ್ಯೂ ಇಲಾಖೆಯವರು ಮೂರುತಿಂಗಳಿಗೊಂದಾವರ್ತಿ ದರಖಾನ್ತು ಸ್ಟೇಟ್‌ಮೆಂಟ್ ಎಂದು ಸರ್ಕಾರಕ್ಕೆ ಕಳುಹಿಸುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಳುಹಿಸುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದರಲ್ಲಿ ಸವರ್ಣ ಹಿಂದೂಗಳಿಗೆ ಕೊಟ್ಟದ್ದು ಮತ್ತು ನಮ್ಮವರ್ಗದ ಜನರಿಗೆ ಕೊಟ್ಟದ್ದು ಎಂದು ಬೇರೆ ಬೇರೆ ಕೊಟ್ಟಿರುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

1 P.M.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಿಮ್ಮ ಸ್ಟೇಟ್‌ಮೆಂಟಿನಂತೆಯೇ ಆಗಲಿ, ಪೆಂಡಿಂಗ್‌ನಲ್ಲಿರತಕ್ಕ ಅರ್ಜಿಗಳಲ್ಲಿ ಜನರಲ್ ಕೇಸುಗಳಿಗೆ ಸಂಬಂಧಪಟ್ಟಿರುವುವುಗಳೆಷ್ಟು, ಮತ್ತು ಡಿಪ್ರೆಸ್ಡ್ ತರಗತಿಯವರಿಗೆ ಸಂಬಂಧಪಟ್ಟಿರುವುವುಗಳೆಷ್ಟು, ಎಂಬುದನ್ನೂ ಹೇಳುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಇಂಡಿವಿಜ್ಯುಯಲ್ ಆಗಿ ಎಷ್ಟೆಷ್ಟು ಕೇಸುಗಳು ಪೆಂಡಿಂಗ್ ನಲ್ಲಿರುತ್ತವೆಂಬುದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹೋಗಲಿ,ಆ ಪೆಂಡಿಂಗ್ ಅರ್ಜಿಗಳ ಒಟ್ಟು ಸಂಖ್ಯೆಯನ್ನಾದರೂ ತಿಳಿಸುವಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಆ ಪ್ರಶ್ನೆಯನ್ನು ಕೇಳಿಲ್ಲ.

Sri M. V. RAMA RAO.—In view of the answers furnished to (a), (b) and (c), may I know from the Government why the question (b) is not clear to the Government ?

Sri KADIDAL MANJAPPA.—Anyhow, to my knowledge, it is not clear.

Sri M. V. RAMA RAO.—The Government's difficulty seem to have centerd round minimum and maximum extent of land in respect of clause (b). The question is whether it has come to their notice that the Caste Hindus are being sanctioned 50 to 100 acres and above whereas the Depressed Classes applicants are given 2 to 3 acres or even guntas only. What is the difficulty for the Government to answer this question ?

Sri KADIDAL MANJAPPA.—I can answer that question now.

Sri M. V. RAMA RAO.—I shall be very grateful to the Minister if he answers it now.

Sri KADIDAL MANJAPPA.—No distinction is made between Caste Hindus and people belonging to the Scheduled Castes.

Sri M. V. RAMA RAO.—Then why has it not come to their notice that cases of grants of 50 to 100 acres have been made in the case of Caste Hindus and grants of less than 2 to 3 guntas to the Depressed Class people?

Sri KADIDAL MANJAPPA.—I have not admitted that. I say that no distinction is made.

Sri M. V. RAMA RAO.—Is the Hon'ble Minister in a position to assert that such distinction has not been made?

Sri KADIDAL MANJAPPA.—To my knowledge, no such distinction has been made.

Sri M. V. RAMA RAO.—Is it the personal knowledge of the Minister for the time being holding the portfolio or the information of the Government that is being placed before the House?

Sri KADIDAL MANJAPPA.—It is my knowledge. For the present, I am Government so far as that Department is concerned.

Sri M. V. RAMA RAO.—Is it not the right of the House to expect information which is available with the Government?

Mr. SPEAKER.—He wants notice to give that information.

ಶ್ರೀ ಕೆ. ಪುಟ್ಟಸ್ವಾಮಿ.—ಈ ಪ್ರಶ್ನೆಯ (c) ಭಾಗಕ್ಕೆ ಕೊಟ್ಟಿರತಕ್ಕ ಉತ್ತರದಲ್ಲಿ:

> "The question is not clear. It is not possible to compile the information required without much time and spending much money which are incommensurate with the results to be achieved."

ಎಂದು ಹೇಳಿದ್ದೀರಿ. ಹಾಗಾದರೆ ತಾವು 10 ಎಕರೆ, 50 ಎಕರೆ, 100 ಎಕರೆಗಳಿಗಿಂತ ಜಾಸ್ತಿಯಾಗಿ ಜಮೀನನ್ನು ಕೊಟ್ಟಿದ್ದೀರಾ?

Sri KADIDAL MANJAPPA.—I cannot answer that question now.

ಶ್ರೀ ಕೆ. ಪುಟ್ಟಸ್ವಾಮಿ.—1947ನೆಯ ಇಸವಿಯಿಂದೀಚೆಗೆ ತಾವು ಎಷ್ಟು ಜನರಿಗೆ 10 ಎಕರೆಗಳಿಗೆ ಮೇಲ್ಪಟ್ಟು ಜಮೀನನ್ನು ಕೊಟ್ಟಿದ್ದೀರಿ ಎಂದು ಪ್ರಶ್ನೆ ಕೇಳಿದ್ದಾರೆ? ಉತ್ತರ ಕೊಡಲು ಸಾಧ್ಯವಾಗದಷ್ಟು, ಎಂದರೆ ಸಾವಿರಾರು ಜನಗಳಿಗೆ ಕೊಟ್ಟಿದ್ದೀರಾ?

Sri KADIDAL MANJAPPA.—He wants the particulars of names, caste, place with taluk of the Caste Hindus that have been sanctioned dry and wet lands.

ಶ್ರೀ ಕೆ. ಪುಟ್ಟಸ್ವಾಮಿ.—'Information not readily available' ಎಂದು ಹೇಳಿದ್ದೀರಿ. ಅದು readily available ಆಗುವುದಕ್ಕೆ ನಾವೇನು ಮಾಡಬೇಕು? ತಾವು ಪ್ರಶ್ನೆಗಳನ್ನೇನೋ ಜೂನ್ 25 ನೆಯ ತಾರೀಖಿನೊಳಗಾಗಿ ಕಳುಹಿಸಬೇಕೆಂದು ಕೇಳಿದ್ದಿರಿ, ಅದರಂತೆ ನಾವು ಕಳುಹಿಸಿದ್ದೇವೆ, ಅದರಿಂದ ಉತ್ತರ ಕೇಳುತ್ತಿದ್ದೇವೆ. Is it not the duty of the Government to make this information readily available to the House?

Sri KADIDAL MANJAPPA.—Sir, we cannot collect State-wide figures regarding castes, names of the taluks, etc. It is very difficult to get the information within a short time.

Mr. SPEAKER.—Some Members will not be satisfied with that answer.

ಶ್ರೀ ಬಿ. ರಾಚಯ್ಯ.—ಇದು ರೆವೆನ್ಯೂ ಅಡ್ಮಿನಿಸ್ಟ್ರೇಷನ್ನಿನಲ್ಲಿ ಒಂದು ಬಹು ಮುಖ್ಯವಾದ ಭಾಗವಲ್ಲವೇ?

ಅಧ್ಯಕ್ಷರು.—'ಇದು' ಎಂದರೆ ಯಾವುದು?

ಶ್ರೀ ಬಿ. ರಾಚಯ್ಯ.—ಅಂಕಿ ಅಂಶಗಳು.

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಮುಖ್ಯವಾದ ಅಂಕಿ ಅಂಶಗಳನ್ನು ಶೇಖರಣೆಮಾಡಿಡಲಾಗಿದೆ.

ಶ್ರೀ ಬಿ. ರಾಚಯ್ಯ.—ಡಿಪ್ರೆಸ್ಡ್ ಕ್ಲಾಸಿನ ದರಖಾಸ್ತುಗಳನ್ನೂ ಮತ್ತು ಇತರ ಕೋಮಿನವರುಗಳ ದರಖಾಸ್ತನ್ನೂ ಬೇರೆ ಬೇರೆಯಾಗಿ ಎರಡು ವಿಭಾಗ ಮಾಡಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿ ಇರತಕ್ಕ ಪ್ರಶ್ನೆಯೇ ಒಂದು, ತಾವು ಕೇಳುತ್ತಿರುವ ಪ್ರಶ್ನೆಯೇ ಒಂದು, ಹೀಗೆ ಸಂಬಂಧವಿಲ್ಲದೆ ಇರತಕ್ಕ ವಿಚಾರಗಳನ್ನು ಕೇಳಿದರೆ,ಅದಕ್ಕೆಲ್ಲ ಉತ್ತರಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಅವರಿಗೂ ಇನ್ನು ಮುಂದಕ್ಕೆ ಕೊಡಬೇಕೆಂದು ಹೇಗೆ ತಿಳಿಸುತ್ತಿದ್ದೀರೋ ಹಾಗೆಯೇ ನಡೆಯುವಂತೆ ಮನನ್ನುಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೂ ಮನಸ್ಸಿನಲ್ಲಿದೆ, ಮುಂದಕ್ಕೂ ಮಾಡೋಣ.

ಶ್ರೀ ಬಿ. ರಾಚಯ್ಯ.—ಕೇಳಿರುವುದು ಅಗತ್ಯವಿಲ್ಲ ಎಂದು ಭಾವಿಸುತ್ತೀರಾ?

Mr. SPEAKER.—There is the answer that it is not possible to compile information required without sparing much time and spending much money.

ಶ್ರೀ ಬಿ. ರಾಚಯ್ಯ.—ಇದೇ ರೀತಿ ಪ್ರಶ್ನೆಗಳು ಅಸೆಂಬ್ಲಿಯ ಮುಂದೆ ಬಹಳ ವರ್ಷಗಳಿಂದ ಹೀಗೆಯೇ ಬರುತ್ತಿವೆ ಯೆಂಬುದು ತಮಗೆ ಮನವರಿಕೆಯಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ. ಈ ಮಾದರಿ ಪ್ರಶ್ನೆಗಳು ಬರುತ್ತಿವೆಯೇ ಹೊರತು ಇದೇ ರೀತಿಯಾಗಿ ಬರುತ್ತಿಲ್ಲ.

ಶ್ರೀ ಕೆ. ಪ್ರಭಾಕರ್.—ದರಖಾಸ್ತಿನ ಮೂಲಕ ಹರಿಜನರಿಗೆ ಕೊಡುತ್ತಿರುವ ಜಮೀನಿನಲ್ಲಿ, ಫಲವತ್ತಾದ ಜಮೀನೇ ಅವರಿಗೆ ಸಿಕ್ಕುತ್ತಿಲ್ಲವೆಂಬ ಅಂಶ ತಮಗೆ ಗೊತ್ತಿದೆಯೇ? ಜಮೀನನ್ನೇನಾದರೂ ಪಡೆದುಕೊಳ್ಳ

ಬೇಕೆಂಬ ಇಷ್ಟ ಅವರಿಗಿಲ್ಲವೋ ಆಥವಾ ಅವರಿಗೆ ಜಮೀನನ್ನು ಕೊಡಲೇಬಾರದೆಂಬ ಉದ್ದೇಶ ಸರ್ಕಾರಕ್ಕೇನಾದರೂ ಇದೆಯೋ ? ಉತ್ಕೃಷ್ಟವಾದ ಜಮೀನನ್ನು ಹರಿಜನರು ಪಡೆದುಕೊಳ್ಳಲು ಬಹಳ ಅಡ್ಡಿ ಆತಂಕಗಳಿರುತ್ತವೆಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಡ್ಡಿ ಆತಂಕಗಳೇನೂ ನಮಗೆ ಕಂಡುಬಂದಿಲ್ಲ. ಸಂಸ್ಥಾನಾಮಳಿ ವ್ಯವಸಾಯಕ್ಕಾಗಿ ಬಿಟ್ಟುಕೊಡಬೇಕೆಂದು ಹೇಳಿರತಕ್ಕ ಈಚಲು ವನಗಳಲ್ಲಿ ಮತ್ತು ಅಮೃತ ಮಹಲ್ ಕಾವಲುಗಳಲ್ಲಿರತಕ್ಕ ಜಮೀನಿನಲ್ಲಿ ಶೇಕಡ 20 ರಷ್ಟನ್ನು ಡಿಪ್ರೆಸ್ಡ್ ಕ್ಲಾಸಿನವರಿಗೆ ಮೀಸಲಾಗಿಡಬೇಕೆಂದು ಆಜ್ಞೆ ಮಾಡಲಾಗಿದೆ.

ಶ್ರೀ ಕೆ. ಪ್ರಭಾಕರ್.—ಕೇವಲ ಅರ್ಧ ಎಕರೆಗಳಷ್ಟು ಇರತಕ್ಕ ಜಮೀನು ಎಲ್ಲಿ ಫಲವತ್ತಾಗಿದೆಯೋ, ಅಂಥದ್ದನ್ನು ಈ ಡಿಪ್ರೆಸ್ಡ್ ಕ್ಲಾಸಿನವರಿಗೆ ಕೊಟ್ಟಿದ್ದಾರೋ, ಅಂಥ ಎಷ್ಟೋ ಕೇಸುಗಳು ಈಗ ತಮ್ಮ ಕ್ಯಾಬಿನೆಟ್ ಮುಂದಿರುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಸರಿಯಾಗಿ ಅರ್ಥವಾಗುತ್ತಿಲ್ಲ.

ಶ್ರೀ ಕೆ. ಪ್ರಭಾಕರ್.—My question is : ಈಗ ಯಾರಾದರೂ ಡಿಪ್ರೆಸ್ಡ್ ಕ್ಲಾಸಿನವರು ಒಂದು ಫಲವತ್ತಾದ ಪ್ರದೇಶದಲ್ಲಿ ಜಮೀನಿಗೆ ಅರ್ಜಿ ಹಾಕಿದರೆ, ಅದಕ್ಕೆ ಅನೇಕರು ಕಿತಾಪತಿ ಉಂಟುಮಾಡಿ, ಅವರಿಗೆ ಜಮೀನುಗಳು ಸಿಕ್ಕದಂತೆಮಾಡುತ್ತಿರುವುದರ ಉದ್ದೇಶವೇನು ? ಇಂಥಾ ಕೇಸುಗಳು ಈಗ ತಮ್ಮವರೆಗೂ ತೀರ್ಮಾನದ ಬಗ್ಗೆ ಬಂದಿಲ್ಲವೇ ?

ಅಧ್ಯಕ್ಷರು.—ಕೆಲವು ಸಂದರ್ಭಗಳಲ್ಲಿ ಅಪೀಲ್ ಹೋಗುವುದಕ್ಕೆ ಅವಕಾಶವಿದೆ. ಅಂಥ ಸಂದರ್ಭಗಳು ಕೆಲವು ಈಗ ಸರ್ಕಾರದ ಮುಂದೆ ಬಂದಿರಬಹುದು.

Sri K. PRABHAKAR.—I want to know definitely whether the Government have come to know that when the Harijans happen to apply for better lands irrespective of extents, often for small patches of lands, there will be great contest on the part of non-Harijans to see that they do not get these lands. I want to know whether such a thing has been noticed by the Government hitherto.

Sri KADIDAL MANJAPPA.—We cannot prevent persons from contesting for such lands.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—55 ಎಕರೆ ಜಮೀನು ಕೊಟ್ಟಿರುವುದು ತಮಗೆ ಗೊತ್ತಿದೆಯೇ ?

(ಉತ್ತರವಿಲ್ಲ.)

ಶ್ರೀ ಎಸ್. ಗೋಪಾಲಗೌಡ.—ನೂರು ಎಕರೆಗಳಿಗಿಂತಲೂ ಮೇಲ್ಪಟ್ಟು ಜಮೀನನ್ನು ಕೊಡತಕ್ಕ ಸಂದರ್ಭದಲ್ಲಿ ಸರ್ಕಾರದವರು ಅನುಸರಿಸತಕ್ಕ ನೀತಿಯೇನಾದರೂ ಇದೆಯೇ ?

Sri KADIDAL MANJAPPA.—It depends upon for what purpose the land is applied for. Generally, land is being granted to landless persons and insufficient holders of land.

ಶ್ರೀ ಎಸ್. ಗೋಪಾಲಗೌಡ.—ಯಾವ ಉದ್ದೇಶಕ್ಕಾಗಿಯೇ ಆಗಲಿ ಅಥವಾ ಯಾರೊಬ್ಬರಿಗೇ ಆಗಲಿ, ಸರ್ಕಾರದವರು 1947ರಿಂದೀಚೆಗೆ 100 ಎಕರೆಗಳ ಮೇಲ್ಪಟ್ಟು ಜಮೀನನ್ನು ಕೊಟ್ಟೇ ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರು ಈ ಭೂಮಿಯನ್ನು ಹಂಚುವುದರಲ್ಲಿ ಯಾವ ನೀತಿಯನ್ನೂ ಅನುಸರಿಸುತ್ತಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಯಾರಿಗೆ ಜಮೀನಿಲ್ಲ ಮತ್ತು ಯಾರಿಗೆ ವ್ಯವಸಾಯಕ್ಕೆ ಜಮೀನು ಸಾಲದೆ ಇರುತ್ತದೆ ಎಂಬ ಇತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭೂಮಿಯನ್ನು ಕೊಡಲಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಹಾಗೆ ತಮ್ಮ ನೀತಿ ಇರುವುದಾದರೆ, ಭೂಮಿ ಯಾರು ಯಾರಿಗೆ ಇಲ್ಲ, ಯಾರು ಯಾರಿಗೆ ಇದೆ, ಯಾರಿಗೆ ಸಾಕಾಗುವಷ್ಟಿರುವುದಿಲ್ಲ ಎಂಬ ಬಗ್ಗೆ ಅಂಕಿ ಅಂಶಗಳ ಒಂದು ಪಟ್ಟಿ ತಮ್ಮಲ್ಲಿರುವುದು ಅಗತ್ಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ತಮ್ಮ ಅಭಿಪ್ರಾಯದ ಮಾತು.

ಶ್ರೀ ಎಸ್. ಗೋಪಾಲಗೌಡ.—ಇಂಥ ಪಟ್ಟಿಯೊಂದು ಇಲ್ಲದಿದ್ದರೆ ತಮ್ಮ ನೀತಿಗೆ ಕುಂದು ಬರುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬರುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅಂಥ ಪಟ್ಟಿಯೊಂದನ್ನು ಇಡತಕ್ಕ ಅಗತ್ಯವಿರುತ್ತದೆಯೆಂಬುದನ್ನು ಮನಗಂಡರೆ ಇಡಲಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಬಂದಾಗ ಮಾಡೋಣ.

ಶ್ರೀ ಟಿ. ಎಣ್. ಮೂಡಲಗಿರಿ ಗೌಡ.—ಡಿಪ್ರೆಸ್ಡ್ ಕ್ಲಾಸಿನವರಿಗೆ ಜಮೀನನು ಕೊಟ್ಟರತಕ್ಕ ಯಾವ ಸಂದರ್ಭದಲ್ಲಾದರೂ, ಹರಿಜನರಲ್ಲದವರು ಹರಿಜನರ ಹೆಸರಿನಲ್ಲಿ ಜಮೀನನ್ನು ಪಡೆದುಕೊಂಡಿರುವರೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿ ಗೌಡ.—50 ಎಕರೆಗಳಿಂದ 100 ಎಕರೆಗಳವರೆಗೆ ಜಮೀನು ಬೇಕೆಂದು ಅರ್ಜಿಹಾಕಿಕೊಂಡಿರುವಂಥ ಡಿಪ್ರೆಸ್ಡ್ ಕ್ಲಾಸಿನವರ ಅರ್ಜಿಗಳ ಸಂಖ್ಯೆ ಎಷ್ಟು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಎಣ್. ಮೂಡಲಗಿರಿ ಗೌಡ.—ಹಾಗೆ 50 ರಿಂದ 100 ರವರೆಗೆ ಅರ್ಜಿಹಾಕಿಕೊಂಡಿದ್ದ ಹರಿಜನರಿಗೆ, ಎಷ್ಟು ಮಂದಿಗೆ 1 ಅಥವಾ 2 ಎಕರೆಗಳಷ್ಟು ಜಮೀನನ್ನು ಕೊಡಲಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಎಣ್. ಮೂಡಲಗಿರಿ ಗೌಡ.—ಹೋಗಲಿ, 100-50 ಎಕರೆಗಳಿಗೆ ಅರ್ಜಿಹಾಕಿದ್ದವರ ಪೈಕಿ ಬೇರೆಯವರಿಗೆ ಕೊಟ್ಟು, ಈ ಹರಿಜನರಿಗೆ ಕೊಡದಿರುವಂಥ ನಿದರ್ಶನಗಳೆದ್ದರೆ, ಅಂಥ ಸಂಖ್ಯೆ ಎಷ್ಟು ಅನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥ ನಿದರ್ಶನಗಳಾವುವೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಈ ಡಿಪ್ರೆಸ್ಡ್ ಕ್ಲಾಸಿನವರು ಊರು ಬಿಟ್ಟು ದೂರವಾಗಿರತಕ್ಕಂಥ ಜಮೀನುಗಳನ್ನು ಅವು ಎಷ್ಟೇ ಫಲವತ್ತಾಗಿದ್ದರೂ ಕೇಳದೆ, ಕೇವಲ ಊರುಪಕ್ಕದಲ್ಲಿರುವ ಜಮೀನುಗಳನ್ನು, ರೊಪ್ಪ, ಕಣ ಇತ್ಯಾದಿಗಳಿಗಾಗಿ ಬಿಟ್ಟುಕೊಂಡಿರುವಷ್ಟು

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ಗಳನ್ನೆ ಕೇಳುತ್ತಿರುವುದರಿಂದಲ್ಲವೇ ಹಾಗೆ ತಕರಾರು ಗಳು ಬಂದಿರುವುದು ?

(ಉತ್ತರವಿಲ್ಲ.)

ಶ್ರೀ ಜಿ. ಪುಟ್ಟಸ್ವಾಮಿ.—ಈ ಪ್ರಶ್ನೆಯನ್ನು ತಾವು ಅಡ್ಮಿಟ್‌ಮಾಡಿಕೊಂಡಿಲ್ಲವೇ ?

ಅಧ್ಯಕ್ಷರು.—ಅದು ಪ್ರಿಂಟೇ ಆಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗಿದ್ದಮೇಲೆ ಅದಕ್ಕೆ ತಕ್ಕ ಅಂಕಿಅಂಶಗಳನ್ನು ಒದಗಿಸುವುದು ಸರ್ಕಾರದ ವರ ಕರ್ತವ್ಯವಲ್ಲವೇ ? ಈ ಪ್ರಶ್ನೆ ಎಷ್ಟು ವರ್ಷ ಗಳಿಂದ ಈ ಸಭೆಯ ಮುಂದೆ ಬರುತ್ತಿದೆಯೆನ್ನು ವುದನ್ನು ಹೇಳುವುದಕ್ಕಾಗುತ್ತದೆಯೇ ?

ಅಧ್ಯಕ್ಷರು.—ಇಂಥ ಪ್ರಶ್ನೆಗಳು ಬರುತ್ತಿವೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗಾದರೆ ಜಮೀನು ಹರಿಜನರಿಗೆ ಸರಾಗವಾಗಿ ದೊರೆಯುತ್ತಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ತಿಳಿದು ಬಂದಂಥ ಕೆಲವು ಸಂದರ್ಭಗಳಲ್ಲಿ ನೂಕ್ತ ರೀತಿಯಲ್ಲಿ ತೀರ್ಮಾನವಾಡಬೇಕೆಂದು ಸ್ಥಳೀಯ ಅಧಿಕಾರಿಗಳಿಗೆ ತಿಳಿವಳಿಕೆ ಕೊಡಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ನೂರಾರು ವರ್ಷಗ ಳಿಂದಲೂ ಕೆಲವು ಜಮೀನುಗಳು ಹಾಗೆಯೆ ಪಾಳು ಬಿದ್ದಿದ್ದಂಥ ಸಂದರ್ಭದಲ್ಲಿ, ಅಂಥ ಜಮೀನುಗಳಿಗೆ ಹರಿ ಜನರು ಅರ್ಜಿ ಹಾಕಿದಾಗಲೂ, ಅದಕ್ಕೂ ತಂಚೆ ತಕ ರಾರುಗಳು ಬರುತ್ತಿರುವ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೋಮಾಳ, ಕೆರೆ ಅಂಗಳ ಇತ್ಯಾದಿ ಜಮೀನುಗಳನ್ನು ಅವು ನೂರಾರು ವರ್ಷಗಳಿಂದ ಪಾಳು ಬಿದ್ದಿದ್ದರೂ ಕೊಡುವುದಕ್ಕಾಗು ವುದಿಲ್ಲ. ಅಷ್ಟೇ ಅಲ್ಲದೆ ಅರ್ಜಿದಾರರು ಜಮೀನ್ದಾರ ರಾಗ್ದಿದ್ದರೂ ಅವರಿಗೆ ಕೊಡುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗಿದ್ದರೆ ಹೆಚ್ಚಿಗೆ ಜಮೀ ನಿರುವ ಜಮೀನ್ದಾರರು ಮತ್ತೆ ಅರ್ಜಿ ಹಾಕಿದರೆ ಅವ ರಿಗೆ ಜಮೀನು ಕೊಡಕೂಡದೆಂದು ಏನಾದರೂ ನಕ್ಯುಲರ್ ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.— ಇದೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗೆ ಜಮೀನಿದ್ದರೂ ಮತ್ತೆ ಅರ್ಜಿಹಾಕಿ ಜಮೀನು ಪಡೆದುಕೊಳ್ಳುವವರು ಇದ್ದಲ್ಲಿ, ಅಂಥವರ ಬಗ್ಗೆ ತಾವೇನು ಕ್ರಮವನ್ನು ಕೈ ಕೊಳ್ಳುತ್ತೀರಿ ?

(ಉತ್ತರವಿಲ್ಲ.)

ಶ್ರೀ ಜಿ. ಶಿವಪ್ಪ.—ತಾವು ತಮ್ಮ ಅಧಿಕಾರದ ಅವ ಧಿಯಲ್ಲಿ ಯಾರಿಗೂ 50, 100 ಎಕರೆ ಜಮೀನುಗಳನ್ನು ಕೊಟ್ಟಿರುವುದಿಲ್ಲವೇ ?

Sri KADIDAL MANJAPPA.—No.

Mr. SPEAKER.—If the House has no objection, I would like to give information about these things. Of course, it is not my function. But with the permission of the House, I am going to tell you that since 1947 October up to the end of March 1952, not more than 10 persons have been granted land between 40 and 92 acres. I can give the names of persons. (1) 92 acres which were granted by the previous Government to one Sri Mari-Gowda was confirmed; (2) fifty acres were granted to one Sri Subbe-Gowda; (3) 50 acres were granted to one Sri Hombe Gowda; (4) 50 acres were granted and confirmed later on to one Sri Nanjappa; (5) & (6) two gentlemen in K. G. F., whose names I do not remember, each one of them was granted 40 acres; (7) one Kale Gowda was granted 40 acres; (8) one Parappa Naika was granted 59 acres of land which was reduced to 34 acres. This is all the information to the best of my knowledge I can give. Ever since the advent of Grow More Food Scheme, nearly $3\frac{1}{2}$ lakhs of acres of land are granted, of which more than $\frac{1}{3}$ was granted to Depressed Classes. This is a sort of information I have given.

———

Discontinuance of granting tank beds for cultivation.

Q.—342. Sri S. SIDDAPPA (Magadi).—

Will the Government be pleased to state :—

whether the system of granting tank beds for temporary cultivation in the State will be discontinued with a view to improve the said tanks ?

A.—Sri KADIDAL MANJAPPA (Minister for Revenue and Public Works).—

Grant of tank beds for temporary cultivation is regulated by Rule 16 of the Land Revenue Rules and modification of these rules is not called for.

ಶ್ರೀ ಎಸ್. ಸಿದ್ದಪ್ಪ.—ನಂಸ್ಥಾನದಲ್ಲರತಕ್ಕ ಕೆರೆ ಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ದೃಷ್ಟಿ ಯಿಂದ ಕೆರೆ ಅಂಗಳಗಳನ್ನು ಹಂಗಾಮಿ ಸಾಗುವಳಿಗೆ ಮರಿಜೂರು ಮಾಡುವುದನ್ನು ನಿಲ್ಲಿಸಲಾಗುವುದೇ ಎಂದು ಕೇಳಿದೆ. ಇದರಮೇಲೆ ಕೆಲವು ಕೆರೆಗಳ ಕೆಳಗೆ ಹಂಗಾಮಿಯಾಗಿ ಕೊಟ್ಟಿರುವುದನ್ನು ವಾಪಸು ತೆಗೆದು ಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆರೆ ಅನುಕೂಲವಾಗಿ ದ್ದರೆ, ಕೆರೆ ಅಂಗಳ ಕೊಟ್ಟಿದನ್ನು ವಾಪಸು ತೆಗೆದುಕೊ ಳ್ಳಬೇಕಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಕೆರೆ ಹಿಂದುಗಡೆ ಜಮೀನು ಸಾಗುವಳಿಯಲ್ಲಿದ್ದರೆ, ಈ ರೀತಿ ಕೆರೆ ಅಂಗಳಗಳನ್ನು ಸಾಗುವಳಿಗೆ ಕೊಟ್ಟರೆ ಅನಾನುಕೂಲವಾಗುತ್ತದೆ. ಆದ್ದರಿಂದ ಅವುಗಳನ್ನು ವಾಪಸುತೆಗೆದುಕೊಳ್ಳುವು ದಕ್ಕೆ ಆರ್ಡರ್ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆ ಜಮೀನು ಸಾಗುವಳಿಯಲ್ಲಿದ್ದರೆ, ಅಗತ್ಯವಾಗಿ ಆಗಬಹುದು.